## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಚನ್ನರಾಯಪಟ್ಟಣ

**ಸಿ.ಸಿ.ನಂ.120/2025**

ಪಿರ್ಯಾದುದಾರರು :- -ವಿರುದ್ಧ - ಆರೋಪಿತರು :-
ಹೆಚ್.ಎಸ್.ವಿಶಾಲಾಕ್ಷಿ ಉಷಾ

ಹೆಸರು :
ತಂದೆಯ ಹೆಸರು :
ವಯಸ್ಸು :
ಉದ್ಯೋಗ :
ವಾಸ :

**ಭಾರತ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿ ಹೇಳಿಕೆ**

**ಪ್ರಶ್ನೆ 1** : ಈ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿರುವಿರಾ ?
ಉತ್ತರ :

**ಪ್ರಶ್ನೆ 2** : ಫ್ರಾಸಾ-1- ಹೆಚ್.ಎಸ್.ವಿಶಾಲಾಕ್ಷಿ ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ಹಾಗೂ ತಾನು ಪರಿಚಯಸ್ಥರಾಗಿದ್ದು, ಆರೋಪಿ ತನ್ನ ದರ್ದು ನಿಮಿತ್ತ ಅಂದರೆ ಗೃಹಕೃತ್ಯದ ಸಲುವಾಗಿ ತನ್ನನ್ನು 2024ನೇ ಆಗಸ್ಟ್ ಮಾಹೆ ಮೊದಲನೆಯ ವಾರದಲ್ಲಿ ಭೇಟಿ ಮಾಡಿ ರೂ.6,00,000/- ಗಳನ್ನು ಸಾಲವಾಗಿ ಕೇಳಲಾಗಿ ತಾನು ಆರೋಪಿಗೆ ದಿನಾಂಕಃ 06.08.2024 ರಂದು ರೂ.6,00,000/- ಗಳನ್ನು ಸಾಲವಾಗಿ ನೀಡಿದ್ದು, ಸದರಿ ಹಣವನ್ನು ತೀರುವಳಿ ಮಾಡುವ ಖಾತ್ರಿಗಾಗಿ ಆರೋಪಿ ತಾನು ಖಾತೆ ಹೊಂದಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಚನ್ನರಾಯಪಟ್ಟಣ ಶಾಖೆಗೆ ಸೇರಿದ ಚೆಕ್ ನಂ.**011614**ನ್ನು ಮುಂಗಡ ದಿಃ 06.02.2025 ಎಂದು ನಮೂದಿಸಿ ತನಗೆ ನೀಡಿದ್ದು, ಸದರಿ ದಿನದಂದು ತಾನು ಹಣ ಪಡೆಯುವ ಸಲುವಾಗಿ ತಾನು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಶ್ರವಣಬೆಳಗೊಳ ಶಾಖೆಗೆ ಚೆಕ್ಕನ್ನು ಹಾಜರುಪಡಿಸಲಾಗಿ ಸದರಿ ಬ್ಯಾಂಕಿನವರು 'Funds Insufficient' ಎಂಬ ಹಿಂಬರಹದೊಂದಿಗೆ ದಿಃ 07.02.2025 ರಂದು ಚೆಕ್ಕನ್ನು ವಾಪಸ್ ನೀಡಿದ್ದು ನಂತರ

ತಾನು ತಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆ ಮೂಲಕ ದಿಃ 11.02.2025 ರಂದು ನೋಟೀಸ್ ನೀಡಿದ್ದು, ಸದರಿ ನೋಟೀಸ್ ದಿಃ 18.02.2025 ರಂದು ವಾಪಸಾಗಿದ್ದು, ಆರೋಪಿಗೆ ಈ ಎಲ್ಲಾ ಮಾಹಿತಿ ತಿಳಿದಿದ್ದರೂ ಯಾವುದೇ ಜವಾಬನ್ನು ನೀಡದೆ, ಸಾಲದ ಹಣವನ್ನು ವಾಪಸ್ಸು ಮಾಡಿರುವುದಿಲ್ಲವಾಗಿ ಸಾಕ್ಷ್ಯನುಡಿಯುತ್ತಾರೆ. ಇದಕ್ಕೇನು ಹೇಳುವಿರಿ?

ಉತ್ತರ :

**ಪ್ರಶ್ನೆ 3** : ಫಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ನೀಡಿರುವ ಚೆಕ್ಕನ್ನು ನಿಪಿ–1 ರಂತೆ, ಆರೋಪಿಯ ಸಹಿಯನ್ನು ನಿಪಿ–1(ಎ) ನಂತೆ, ಚೆಕ್ ರಿರ್ಟನ್ ಮೆಮೋ ನಿಪಿ–2 ರಂತೆ, ಅಂಚೆ ರಶೀದಿ ನಿಪಿ–3 ರಂತೆ, ಲೀಗಲ್ ನೋಟಿಸ್ ನಿಪಿ–4 ರಂತೆ, ಮತ್ತು ಜಾರಿಯಾಗದೇ ವಾಪಸ್ಸು ಬಂದ ಅಂಚೆ ಲಕೋಟೆ ಮತ್ತು ತಿಳುವಳಿಕೆ ಪತ್ರವನ್ನು ನಿಪಿ–5 ಮತ್ತು ನಿಪಿ–5(ಎ) ನಂತೆ ಗುರುತಿಸಿರುವುದಾಗಿ ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೇನು ಹೇಳುವಿರಿ?

ಉತ್ತರ :

**ಪ್ರಶ್ನೆ 4** : ನಿಮಗೆ ಇನ್ನೇನಾದರೂ ಹೇಳುವುದು ಇದೆಯಾ?

ಉತ್ತರ :

**ಪ್ರಶ್ನೆ 5** : ನೀವು ನಿಮ್ಮ ಪರವಾಗಿ ಯಾವುದಾದರೂ ದಾಖಲೆಯನ್ನು ಹಾಜರು ಮಾಡುವಿರಾ?

ಉತ್ತರ :

**ಪ್ರಶ್ನೆ 6** : ನಿಮ್ಮ ಪರವಾಗಿ ಸಾಕ್ಷಿ ಮಾಡಿಸುವಿರಾ ?

ಉತ್ತರ :

**ದಿನಾಂಕ 1 ನೇ ಏಪ್ರಿಲ್ 2026**

ಆರೋಪಿ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ತಯಾರಿಸಿ ಆತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ನಂತರ ಆತನ ಸಹಿ ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಓ. ಹೇ. ಕೇ. ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ., ಚನ್ನರಾಯಪಟ್ಟಣ.